ಜರ್ಮನಿಯ ಪ್ರವಾಸಿ ವೀಸಾ, ಟಿಕೇಟುಗಳು, ಗುರುತಿನ ಚೀಟಿಗಳು, ಪಾಸ್‌ಪೋರ್ಟುಗಳು, ಮಿಲಿಟರಿ ಐಡಿ ಹೀಗೆ ವಿವಿಧ ದಾಖಲೆಗಳ ಮಾದರಿಯನ್ನು ನಕಲಿಸಲು ನನಗೆ ಕೊಟ್ಟರು. ಈ ಕೆಲಸ ನಿಜಕ್ಕೂ ತ್ರಾಸದಾಯಕವಾಗಿತ್ತು. ಈ ಕಾರ್ಯಾಚರಣೆಗೆ ಹೋಗುವವರನ್ನು ಗಂಟೆಗಟ್ಟಲೆ ಮಾತಾಡಿಸಿ ಅವರ ಬಗ್ಗೆ ತಿಳಿಯಬೇಕಿತ್ತು. ಆಫೀಸಿನ ದಾಖಲೆಗಳಲ್ಲದೆ ಅವರು ಆಯಾ ಪ್ರದೇಶಗಳಲ್ಲಿ ನೆಲೆಸಿದ್ದವರು ಎನ್ನುವುದನ್ನು ಸಾಬೀತು ಪಡಿಸಲು ಪೋಸ್ಟ್ ಆಫೀಸಿನ ಮುದ್ರೆ ಹೊತ್ತು ಬಂದಿದ್ದ ಅಮ್ಮನೋ, ಪ್ರೇಯಸಿಯೋ ಬರೆದಿದ್ದ ಹಳೆಯ ಪತ್ರಗಳು, ಆಸ್ತಮಾ ರೋಗಕ್ಕೆ ಔಷಧಿ ಬರೆದು ಕೊಟ್ಟಿದ್ದ ಡಾಕ್ಟರ್ ಚೀಟಿ, ಸಾಮಾನು ಕೊಂಡ ರಸೀದಿ, ಪ್ರತಿಯೊಬ್ಬನ ಕೌಶಲ್ಯಕ್ಕೆ ತಕ್ಕಂತೆ ಅವನ ವೃತ್ತಿ ನೈಪುಣ್ಯತೆಯ ವಿವರ ಹೊತ್ತ ಗುರುತಿನ ಚೀಟಿ ಹೀಗೆ ಹಲವನ್ನು ಸೃಷ್ಟಿಸಬೇಕಾಗಿತ್ತು.

ಇಂಡೋ ಚೈನಾ ಯುದ್ಧಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಲು ಕೇಳಿದಾಗ ಸೇನೆಯಿಂದ ದೂರವಾದೆ. ವಸಾಹತುಶಾಹಿ ಹಾಗೂ ಶಾಂತಿಯ ಸಂದರ್ಭದಲ್ಲಿ ಅನಾವಶ್ಯಕ ಯುದ್ಧ ಚಟುವಟಿಕೆಗಳಿಗೆ ನಾನು ವಿರೋಧಿಯಾಗಿದ್ದೆ.

★★★

ನಿರಾಶ್ರಿತರ ಶಿಬಿರಗಳಿಂದ ಬದುಕುಳಿದು ಬಂದವರನ್ನು ಅಕ್ರಮವಾಗಿ ಪ್ಯಾಲೆಸ್ಟೈನ್‌ಗೆ ಕಳುಹಿಸಲು ನಾನು ಕೆಲಸ ಮಾಡುತ್ತಿದ್ದ ಹಳೆಯ ಗುಂಪಿನಲ್ಲಿದ್ದ ಸ್ನೇಹಿತರು ಪ್ರಯತ್ನಿಸುತ್ತಿದ್ದರು. ಮೊದಲಿಗೆ ಅವರು ಆ ಜನರಿಗಾಗಿ ದಾಖಲೆಗಳನ್ನು ಸೃಷ್ಟಿಸಿಕೊಡಲು ಕೇಳಿದಾಗ ನಾನು ಒಪ್ಪಲಿಲ್ಲ. ಪರಿಸ್ಥಿತಿಯನ್ನು ನನಗೆ ಅರ್ಥಮಾಡಿಸಲು ಒಮ್ಮೆ ಆ ನಿರಾಶ್ರಿತ ಶಿಬಿರಗಳಿಗೆ ಕರೆದುಕೊಂಡು ಹೋದರು. ಅಲ್ಲಿನ ಪರಿಸ್ಥಿತಿ ನನ್ನ ನಿಲುವನ್ನು ಬದಲಿಸಿಬಿಟ್ಟಿತು.

ಯುದ್ಧದ ಅವಶೇಷಗಳ ನಡುವೆ ಬದುಕು ಚಿಗುರೊಡೆಯಲು ಹವಣಿಸುವುದನ್ನು ಅಲ್ಲಿ ನೋಡಿದೆ. ಅಲ್ಲಿದ್ದವರೊಂದಿಗೆ ಮಾತಾಡಿದಾಗ ಬೇರೆಯದೇ ಲೋಕ ತೆರೆದುಕೊಂಡಿತು. ತಾವು ಯಾವ ದೇಶಕ್ಕೆ ಸೇರಿದ್ದರೋ ಅಲ್ಲಿಗೂ ಹೋಗಲಾಗದೆ ಎಲ್ಲಿ ತಂದುಬಿಟ್ಟಿದ್ದರೋ ಆ ದೇಶಕ್ಕೂ ಸೇರಿರದ ಅವರ ಪಾಡು ಅಯೋಮಯವಾಗಿತ್ತು. ಈ ಹೋರಾಟದ ನಡುವೆಯೇ ಅಲ್ಲಿ ಹೊಸ ಸಂಬಂಧಗಳು ಮೂಡಿ ಹೊಸ ಬದುಕುಗಳು ತಮ್ಮ ಕುಟುಂಬಗಳನ್ನು ಕಂಡುಕೊಂಡಿದ್ದವು. ಅಲ್ಲಿನ ಎಲ್ಲಕ್ಕಿಂತ ಘೋರ ಅನುಭವವಾದದ್ದು ಯುದ್ಧಕ್ಕೆ ಸಿಲುಕಿ ತಂದೆ ತಾಯಂದಿರನ್ನು ಕಳೆದುಕೊಂಡು ಅನಾಥರಾಗಿದ್ದ ಮಕ್ಕಳ ಶಿಬಿರಗಳನ್ನು ಹಾದುಹೋದಾಗ. ಹಸಿವಿನಿಂದ ಕಂಗೆಟ್ಟ ಆ ಮಕ್ಕಳು ಸುತ್ತಲ ಪ್ರದೇಶಗಳ ಮೇಲೆ ದಾಳಿ ನಡೆಸಿ ಆಹಾರ ಕಸಿಯುವ ಮಟ್ಟವನ್ನು ಮುಟ್ಟಿದ್ದರು. ಆರು ವರ್ಷದ ಮಗು ಕೂಡ ಮುಗ್ಧತೆಯನ್ನು ಕಳೆದುಕೊಂಡು ಕೌರ್ಯವನ್ನು ಮೈಗೂಡಿಸಿಕೊಂಡುಬಿಟ್ಟಿತ್ತು. ಯಾವ ಮನುಷ್ಯರನ್ನೂ ನಂಬದ ಹಂತಕ್ಕೆ ಹೋಗಿ ಮುಟ್ಟಿದ್ದ ಈ ಮಕ್ಕಳು ನಮ್ಮ ಜೀಪು ಅವರ ಕ್ಯಾಂಪುಗಳ ನಡುವೆ ಹಾದುಹೋದಾಗ ದಾಳಿ ಮಾಡಿದ್ದನ್ನು ಕಂಡು ನಡುಗಿಹೋಗಿದ್ದೆ. ದೊಡ್ಡವರೆಲ್ಲ ತಮ್ಮ ಶತ್ರುಗಳು ಎಂದೇ ಅವರು ನಂಬಿಬಿಟ್ಟಿದ್ದರು.

ಆ ಕ್ಯಾಂಪಿನಿಂದ ಹೊರಬರುತ್ತಿದ್ದಂತೆ ನನ್ನ ಬದುಕಿನ ಅತಿ ದೊಡ್ಡ ಭ್ರಮೆ ಹರಿದಿತ್ತು. ಯುದ್ಧ ಗೆದ್ದರೆ ಅಥವ ನಿಂತರೆ ಎಲ್ಲವೂ ಸರಿಹೋಗುತ್ತದೆ ಎನ್ನುವುದು ಸುಳ್ಳಾಗಿತ್ತು. ಸಹಸ್ರ ಸಂಖ್ಯೆಯಲ್ಲಿ ಹುಟ್ಟಿಕೊಂಡಿದ್ದ ನಿರಾಶ್ರಿತರನ್ನು ಎಲ್ಲಿಗೆ ಕಳುಹಿಸಬೇಕು ಎನ್ನುವುದು ಬಗೆಹರಿಯದ ಸಮಸ್ಯೆಯಾಗಿತ್ತು. ಪ್ಯಾಲೆಸ್ಟೈನ್ ಯಹೂದಿ ರಾಜ್ಯವಾಗಿದ್ದರೂ ಅದಿನ್ನೂ ಬ್ರಿಟಿಷರ ನಿಯಂತ್ರಣದಲ್ಲಿತ್ತು. ಅಲ್ಲಿಗೆ ಹೋಗಲು ಬಯಸಿ ಸಲ್ಲಿಸಿದ್ದ ಅರ್ಜಿಗಳೇ ಇನ್ನೂ